ಅಧ್ಯಕ್ಷರು: ಮಾನ್ಯ ಕೆ.ಎಸ್.ಸುಬ್ಬಾರೆಡಿಯವರು ಯಾವಾಗಲೂ ಬೇಗ ಬರುತ್ತಿದ್ದರು, ಇವತ್ತು ಏಕೆ ತಡವಾಗಿ ಬಂದಿದ್ದಾರೆ?

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಇವತ್ತು ಟೈಮ್ ಹಾಕಿರುವಂಥಾದ್ದು ಸರಿಯಾಗಿ ಇಲ್ಲ.

ಅಧ್ಯಕ್ಷರು: ನಾವು ಬಿ.ಎ.ಸಿ.ತೀರ್ಮಾನದಂತೆ ಟೈಮ್ ಹಾಕಿದ್ದೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಪೇಪರ್‌ನಲ್ಲಿ 11.00ಗಂಟೆ ಎಂದು ಬಂದಿದೆ, ತಾವು 10.00ಗಂಟೆ ಎಂದು ಹಾಕಿದ್ದೀರಿ, ಮತ್ತು ತಾವು 10.30ಗಂಟೆಗೆ ಬಂದಿದ್ದೀರಿ.

ಅಧ್ಯಕ್ಷರು: ಇಲ್ಲ, ನಾನು 9.45ಗಂಟೆಗೆ ಬಂದಿದ್ದೇನೆ.

ಟಿ.ನರಸೀಪುರದಲ್ಲಿ ರಸ್ತೆ ನಿರ್ಮಾಣ

217 (2426) ಡಾ: ಭಾರತಿ ಶಂಕರ್ (ಟಿ.ನರಸೀಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ

ಅ) ಟಿ.ನರಸೀಪುರ ಪಟ್ಟಣದಲ್ಲಿ ತಿರುಮಕೂಡಲು ವೃತ್ತದಿಂದ ವಿದ್ಯೋದಯ ಕಾಲೇಜು ವೃತ್ತದವರೆಗೆ ಇರುವ ರಸ್ತೆಯಲ್ಲಿ ಮುಖ್ಯ ಬಸ್ ನಿಲ್ದಾಣವಿದ್ದು, ದಿನಂಪತ್ರಿ 4000 ಕ್ಕೂ ಹೆಚ್ಚು ವಾಹನಗಳ ಸಂಚಾರವಿದ್ದು, ರಸ್ತೆ ತುಂಬ ಹದಗೆಟ್ಟಿ ಸಾರ್ವಜನಿಕ ಪ್ರಯಾಣಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚ ಎಷ್ಟು ಮತ್ತು ಈ ಕಾಮಗಾರಿಯನ್ನು ಪೂರ್ಣಗೊಳಿಸಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಧರ್ಮಸಿಂಗ್ ಲೋಕೋಪಯೋಗಿ ಸಚಿವರು.

ಅ) ಹೆಚ್ಚು ವಾಹನಗಳ ಸಂಚಾರವಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯನ್ನು ಜೋಡಿ ರಸ್ತೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಇ) 1999-2000 ದ ದರಪಟ್ಟಿಯಂತೆ ಈ ಕಾಮಗಾರಿಯ ಅಂದಾಜು ಮೊತ್ತ 115.00 ಲಕ್ಷ ರೂ.ಗಳು. ತಿರುಮಕೂಡಲು ವೃತ್ತದಿಂದ ವಿದ್ಯೋದಯ ಕಾಲೇಜು ವೃತ್ತದವರೆಗಿನ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆಯಾಗಿದೆ.

ಡಾ:ಭಾರತಿ ಶಂಕರ್: ಮಾನ್ಯ ಅಧ್ಯಕ್ಷರೆ, ನಾವು ರಸ್ತೆಯ ವಿಚಾರವಾಗಿ ನವೆಂಬರ್ ತಿಂಗಳಲ್ಲಿ ಮಾನ್ಯ ಲೋಕೋಪಯೋಗಿ ಮಂತ್ರಿಯವರೆಗೆ ತೋರಿಸಿದ್ದೇವೆ, ಅವರು ಸೇತುವೆಯ ವಿಚಾರವಾಗಿ ಅಲ್ಲಿಗೆ ಜನವರಿ ತಿಂಗಳಲ್ಲಿ ಬಂದಿದ್ದಾಗ ಇದರ ಬಗ್ಗೆ ಪ್ರಸ್ತಾನೆಯನ್ನು ಕೊಟ್ಟಿದ್ದೇವೆ. ಇಲ್ಲಿಗೆ 115ಲಕ್ಷ ರೂಪಾಯಿಗಳ ಡಬ್ಬಲ್ ರೋಡ್‌ನ ಅಗತ್ಯವಿದೆ ಎಂದು ಮಾನ್ಯ

ಲೋಕೋಪಯೋಗಿ ಮಂತ್ರಿಯವರು ಮನಗಂಡಿದ್ದಾರೆ. ಅವರು ಅಲ್ಲಿ ನಡೆದಂತಹ ಪತ್ರಿಕಾ ಗೋಷ್ಠಿಯಲ್ಲೂ ಕೂಡ ಭರವಸೆಯನ್ನು ಕೊಟ್ಟಿದ್ದಾರೆ. ಈ ರಸ್ತೆ ಬಗ್ಗೆ ಮುಖ್ಯವಾಗಿ ಹೇಳುವುದಾದರೆ ಕೊಳ್ಳೆಗಾಲ, ಎಳಂದೂರು, ಚಾಮರಾಜನಗರ, ಇನ್ನಿತರ ತಾಲ್ಲೂ ಕುಗಳಿಗೆ ಹೋಗುವಂತಹ ಪ್ರಮುಖವಾದಂತಹ ರಸ್ತೆಯಾಗಿದೆ. ಅದೇ ರೀತಿಯಲ್ಲಿ ಮಹದೇಶ್ವರ ಬೆಟ್ಟ, ತಮಿಳುನಾಡು, ಸೇಲಂ, ಕೊಯಮತ್ತೂರಿಗೆ ಮೈಸೂರಿನಿಂದ ಹೋಗಬೇಕಾದರೆ ಇದು ಅತ್ಯಂತ ಪ್ರಮುಖವಾದಂತಹ ರಸ್ತೆಯಾಗಿದೆ. ಈ ರಸ್ತೆಯಲ್ಲಿ ಪ್ರತಿನಿತ್ಯ ನಾಲ್ಕು ಸಾವಿರ ವಾಹನಗಳು ಓಡಾಡುತ್ತವೆ, ಮರಳಿನ ಲಾರಿಗಳು, ಎರಡೂವರೆ ಸಾವಿರ ಬಸ್ಸುಗಳು ಹಾಗೂ ಇನ್ನಿತರ ವಾಹನಗಳು ಓಡಾಡುತ್ತವೆ. ಕಳೆದ ಎರಡು ಮೂರು ತಿಂಗಳುಗಳಿಂದ ಅಪಘಾತಗಳು ಆಗಿವೆ. ಈ ರಸ್ತೆ ಪೂರ್ಣ ಹಳ್ಳವಾಗಿದೆ. ಈ ರಸ್ತೆಯ ವಿಚಾರವಾಗಿ ಹೇಳುವುದಾದರೆ ಇದು ನಮ್ಮ ಜಿಲ್ಲೆಯಲ್ಲಿ ಬರುವಂತಹ ಪ್ರಮುಖವಾದಂತಹ ರಸ್ತೆಯಾಗಿದೆ. ಆದುದರಿಂದ ಈ ರಸ್ತೆಯನ್ನು ಡಬ್ಬಲ್ ರಸ್ತೆಯನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್.ರಂಗನಾಥ್(ಅರಣ್ಯ, ಜೀವಿಶಾಸ್ತ್ರ, ಪರಿಸರ ಮಂತ್ರಿಗಳು) (ಲೋಕೋಪಯೋಗಿ ಇಲಾಖೆ ಮಂತ್ರಿಯವರ ಪರವಾಗಿ) ಮಾನ್ಯ ಅಧ್ಯಕ್ಷರೆ, ಈ ರಸ್ತೆ ಜಿಲ್ಲಾ ಪಂಚಾಯಿತಿಗೆ ಸೇರಿದೆ, ಮಾನ್ಯ ಲೋಕೋಪಯೋಗಿ ಮಂತ್ರಿಯವರು ಮಾಡಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ರಸ್ತೆ ಜಿಲ್ಲಾ ಪಂಚಾಯಿತಿಯಿಂದ ಪಿ.ಡಬ್ಲ್ಯೂ.ಡಿಗೆ ಹಸ್ತಾಂತರವಾದ ತಕ್ಷಣವೇ ಕ್ರಮ ತೆಗೆದುಕೊಳ್ಳುವಂಥಾದ್ದಕ್ಕೆ ವಿರ್ಪಾಡನ್ನು ಇಲಾಖೆ ಮಾಡುತ್ತದೆ.

ಡಾ: ಭಾರತಿ ಶಂಕರ್: ಇದಕ್ಕೆ ಸಂಬಂಧಪಟ್ಟಂತಹ ಪ್ರಸ್ತಾವನೆ ದಿ:29-1-2000ದಲ್ಲಿ ಮೈಸೂರು ವೃತ್ತದಿಂದ ಸರ್ಕಾರಕ್ಕೆ ಬಂದಿದೆ. ಲೋಕೋಪಯೋಗಿ ಮಂತ್ರಿಯವರಲ್ಲಿ 115 ಲಕ್ಷ ರೂಪಾಯಿಗಳ ಪೂರ್ಣ ಮಾಹಿತಿ ಇದೆ.

ಶ್ರೀ ಕೆ.ಹೆಚ್.ರಂಗನಾಥ್: ನಮಗೆ ಗೊತ್ತಿದೆ, ಈ ರಸ್ತೆ ಜಿಲ್ಲಾ ಪಂಚಾಯಿತಿಯಿಂದ ಪಿ.ಡಬ್ಲ್ಯೂ. ಇಲಾಖೆಗೆ ಬಂದ ತಕ್ಷಣ ಅದಷ್ಟು ಜಾಗ್ರತೆ ಮಾಡಿಕೊಡುತ್ತೇವೆಂದು ಮಾನ್ಯ ಮಂತ್ರಿಯವರು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಈ ವಿಚಾರ ಸರ್ಕಾರದ ಗಮನದಲ್ಲೂ ಇದೆ.

ಅಧ್ಯಕ್ಷರು: ಮಾನ್ಯ ಎಸ್.ಎಸ್.ಪಾಟೀಲ್‌ರವರೆ, ತಾವು ಟಿ.ನರಸೀಪುರದ ಬಗ್ಗೆ ಕೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಕೃಷ್ಣಮೂರ್ತಿಯವರು ಸಭೆಯಲ್ಲಿ ಇಲ್ಲ. ಅವರು ಒಂದು ಉತ್ತಮವಾದಂತಹ ಪ್ರಶ್ನೆಯನ್ನು ಕೇಳಿದ್ದಾರೆ. ನಬಾರ್ಡ್ ರಸ್ತೆಯ ಬಗ್ಗೆ ಅರ್ಧ ಗಂಟೆಯ ಕಾಲ ಚರ್ಚೆಯಾದರೆ ಒಳ್ಳೆಯದು.

ಅಧ್ಯಕ್ಷರು: ತಾವು ಅರ್ಧ ಗಂಟೆಯ ಚರ್ಚೆಯಾಗಬೇಕೆಂದು ಕೇಳುತ್ತಿದ್ದೀರಿ. ಮಾನ್ಯ ಲೋಕೋಪಯೋಗಿ ಮಂತ್ರಿಯವರು ಬರಲಿ, ಇದನ್ನು ತೆಗೆದುಕೊಳ್ಳೋಣ.

ಶ್ರೀ ಕೆ.ಹೆಚ್.ರಂಗನಾಥ್: ರೂಲ್ಸ್ ಆಫ್ ಪ್ರೊಸಿಜರ್ ಪ್ರಕಾರ ಮಾನ್ಯ ಸದಸ್ಯರು ಸಭೆಯಲ್ಲಿ ಇಲ್ಲದೇ ಹೋದರೂ ಕೂಡ ಆ ವಿಷಯದ ಆವಶ್ಯಕತೆ ಇದ್ದರೆ ಆದಕ್ಕೆ ತಾವು ಅಪ್ಪಣೆಯನ್ನು ಕೊಟ್ಟರೆ ತೆಗೆದುಕೊಳ್ಳಬಹುದು. ತಾವು ಅಪ್ಪಣೆ ಕೊಟ್ಟರೆ ನಾವು ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು: ಅರ್ಧ ಗಂಟೆ ಚರ್ಚೆಗೆ ಹಾಕುವಂಥಾದ್ದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಬರುತ್ತಾರೆ.

ಶ್ರೀ ಕೆ.ಎಚ್.ರಂಗನಾಥ್: ಅರ್ಧ ಗಂಟೆ ಚರ್ಚೆಗೆ ಏಕೆ ಸ್ವಾಮಿ? ಸರ್ಕಾರ ಉತ್ತರ ಕೊಟ್ಟ ಮೇಲೆ ಸಭೆಗೆ ಒಪ್ಪಿಗೆ ಆಗದೇ ಹೋದರೆ, ಈ ವಿಷಯಲ್ಲಿ ಇನ್ನೂ ಪ್ರಶ್ನೆಗಳನ್ನು ಕೇಳತಕ್ಕಂಥ ಪ್ರಸಂಗ ಬಂದರೆ ಆಗ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವರು ಕೇಳತಕ್ಕಂಥಾದ್ದು ಇದೆ, ತಾವು ಅದಕ್ಕೆ ಅನುಮತಿಯನ್ನು ಕೊಡತಕ್ಕಂಥಾದ್ದು ಇದೆ. ಅವರು ಪ್ರಶ್ನೆಯನ್ನು ಕೇಳಲಿಲ್ಲ. ಇನ್ನೂ ಉತ್ತರವೇ ಬಂದಿಲ್ಲ. ಈ ಪ್ರಶ್ನೆ ಸಭೆಯ ಮುಂದೆ ಬಂದೇ ಇಲ್ಲ.

ಅಧ್ಯಕ್ಷರು: ತಾವು ವಿಷಯವನ್ನು ನನ್ನ ಮುಂದೆ ಇಟ್ಟಿದ್ದೀರಿ, ತಾವು ನನಗೆ ಬಿಡಿ.

ಶ್ರೀ ಸಿ.ಬಿ.ಸುರೇಶ್ ಬಾಬು: ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಸಚಿವರು ಟಿ.ನರಸೀಪುರದ ಬಗ್ಗೆ ಉತ್ತರ ಹೇಳಿದರು. ಆ ರಸ್ತೆ ಏನು ಇದೆ ಆ ರಸ್ತೆ ನನ್ನ ಕ್ಷೇತ್ರಕ್ಕೂ ಬರುತ್ತದೆ. ನನ್ನ ಕ್ಷೇತ್ರದಿಂದ ಬಸ್ಸುಗಳು ಆ ರಸ್ತೆಯಲ್ಲಿ ಬರುತ್ತವೆ. ಈ ರಸ್ತೆ ಲೋಕೋಪಯೋಗಿ ಇಲಾಖೆಗೆ ಯಾವಾಗಲಾದರೂ ವರ್ಗವಾಗಲಿ, ಆ ರಸ್ತೆಯಲ್ಲಿ ಸಾಕಷ್ಟು ಗುಂಡಿಗಳು ಬಿದ್ದಿರುವುದರಿಂದ, ಆ ಗುಂಡಿಗಳನ್ನು ಮುಚ್ಚಿ ರಸ್ತೆ ಸಂಚಾರಕ್ಕೆ ಸುಗಮ ವ್ಯವಸ್ಥೆಯನ್ನು ಮಾಡಲು ಮನಸ್ಸು ಮಾಡಿದರೆ ಒಳ್ಳೆಯದು. ಈಗಾಗಲೇ ಭಾರತೀಶಂಕರ್ ಅವರ ಫೋಟೋ ಸಮೇತ ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸ್ವಲ್ಪ ಗಮನಹರಿಸಬೇಕು.

ಶ್ರೀ ಭಾರತೀಶಂಕರ್: ಈ ವಿಚಾರದಲ್ಲಿ ನನ್ನದೊಂದು ಸಲಹೆ. ಅನೇಕ ರಸ್ತೆಗಳು ಜಿಲ್ಲಾ ಪರಿಷತ್ತು ವ್ಯಾಪ್ತಿಗೆ ಬರುವುದು, ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವುದು, ಈ ರೀತಿಯ ಒಂದು ಗೊಂದಲಮಯವಾದ ಪರಿಸ್ಥಿತಿ ಇದೆ. ಈ ಸಂದರ್ಭದಲ್ಲಿ ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಆಲೋಚನೆ ಮಾಡಿರುವಂತೆ ಎಲ್ಲಾ ರಸ್ತೆಗಳನ್ನು ಸೇರಿಸಿ ಒಂದು ಕಾರ್ಪೊರೇಷನ್ ಆಗಿ ಮಾಡಿ ಒಂದು ಹೆಡ್‌ನಲ್ಲಿ ಬಂದರೆ ಅನೇಕ ಗ್ರಾಮಾಂತರ ಪ್ರದೇಶದ ರಸ್ತೆಗಳ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುತ್ತದೆ. ನಬಾರ್ಡ್ ಮೂಲಕ ರಸ್ತೆಗಳನ್ನು ತೆಗೆದುಕೊಳ್ಳಬೇಕಾದರೆ ಅವರದ್ದೇ ಆದ ಒಂದು ಸ್ಪೆಸಿಫಿಕೇಶನ್ ಅಂಡ್ ಕಂಡೀಷನ್ಸ್ ಹಾಕುತ್ತಾರೆ. ಅನೇಕ ರಸ್ತೆಗಳಿಗೆ ಇದರಿಂದ ನಬಾರ್ಡ್ ಮೂಲಕ ಬರುವ ಧನ ಸಹಾಯವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ರಸ್ತೆ ಬಗ್ಗೆ ಪತ್ರಿಕೆಗಳಲ್ಲಿ ಸತತವಾಗಿ ಬರುತ್ತಿರುವುದರಿಂದ ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದು ಅತ್ಯಂತ ಪ್ರಮುಖವಾದ ಅಂತರ್‌ರಾಜ್ಯ ರಸ್ತೆಯಲ್ಲಿ ಇದೆ. ಇದು ಇತರೇ ಜಿಲ್ಲೆ ಮತ್ತು ತಾಲ್ಲೂಕುಗಳಿಗೆ ಹೋಗುವ ರಸ್ತೆ ಸಹ ಆಗಿದೆ. ಈ ಬಗ್ಗೆ ಮಾನ್ಯ ಗುರು ಸ್ವಾಮಿಯವರು ಸಹ ಪತ್ರಿಕೆಗಳಲ್ಲಿ ನೋಡಿದ್ದಾರೆ. ನಾನು ಕಳೆದ ಜನವರಿ ತಿಂಗಳಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ. ಆದ್ದರಿಂದ ಮಾನ್ಯ ಮಂತ್ರಿಗಳು ದಯಮಾಡಿ ಈ ರಸ್ತೆಯನ್ನು ಆದ್ಯತೆ ಮೇಲೆ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಎಚ್.ರಂಗನಾಥ್: ಬೇರೆ ಬೇರೆ ರಸ್ತೆಗಳನ್ನು ಒಂದೇ ನಿಗಮದ ಅಡಿಯಲ್ಲಿ ತೆಗೆದುಕೊಳ್ಳುವುದು ಸಾಧ್ಯವಾಗದ ಮಾತು. ಇದು ಬೇರೆ ಬೇರೆ ಕ್ಷೇತ್ರ ಇದೆ. ಜಿಲ್ಲಾ ಪರಿಷತ್ತಿಗೆ

ಬೇರೆ ಇದೆ. ತಾಲ್ಲೂಕು ಪಂಚಾಯಿತಿಗೆ ಬೇರೆ ಇದೆ. ಗ್ರಾಮ ಪಂಚಾಯಿತಿಗೆ ಬೇರೆ ಇದೆ. ಇದು ಒಂದು ಪಾಲಿಸಿ ಮ್ಯಾಟರ್ ಆಗುತ್ತದೆ. ಸರ್ಕಾರ ಈ ಬಗ್ಗೆ ತೀರ್ಮಾನ ತೆಗೆದುಕೊಂಡರೆ ಲೋಕೋಪಯೋಗಿ ಇಲಾಖೆ ರಸ್ತೆಗಳನ್ನು ವಹಿಸಿಕೊಟ್ಟರೆ ಆಗ ಅವರು ಮಾಡತಕ್ಕಂಥ ಕೆಲಸವನ್ನು ಅವರು ಮಾಡುತ್ತಾರೆ. ಆದರೆ ಮಾನ್ಯ ಸದಸ್ಯರ ಕಳಕಳಿ ಏನು ಇದೆ ಅಂದರೆ ಈ ರಸ್ತೆ ಸರಿಯಾಗಿಲ್ಲ ಇದು ಆಗಬೇಕೆನ್ನತಕ್ಕಂಥಾದ್ದು, ಮಾನ್ಯ ಸದಸ್ಯರ ಕಳಕಳಿ ಸರ್ಕಾರದ ಗಮನಕ್ಕೆ ಬಂದಿದೆ. ಈ ರಸ್ತೆಯನ್ನು ಅತಿ ಶೀಘ್ರವಾಗಿ ಸರ್ಕಾರ ಮಾಡಿಕೊಡುತ್ತದೆ.

ಕರ್ನಾಟಕ ರಾಜ್ಯದ ಲಲಿತಕಲೆಗಳಿಗೆ ಸಹಾಯಧನ

218 (2316) ಶ್ರೀ ಆರ್.ಅಶೋಕ್ (ಉತ್ತರ ಹಳ್ಳಿ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕನ್ನಡ ಕಲೆ, ಕನ್ನಡ ನಾಟಕಗಳು, ಯಕ್ಷಗಾನ ಮುಂತಾದ ಕನ್ನಡ ಚಟುವಟಿಕೆಗಳಿಗೆ ಇಲಾಖೆಯವರ ಮಾಸಾಶನ, ಗೌರವಧನ ಹಾಗೂ ಸಹಾಯಧನ ನೀಡಲಾಗುತ್ತಿದೆಯೆ;

ಆ) ಹಾಗಿದ್ದರೆ, ಈ ಪ್ರಸಕ್ತ ಸಾಲಿನಲ್ಲಿ ನೀಡುತ್ತಿರುವ ಗೌರವಧನ, ಸಹಾಯಧನದ ಮೊತ್ತವೆಷ್ಟು;

ಇ) ಕನ್ನಡ ನಾಡು ನುಡಿಗೆ ಶ್ರಮಿಸಿ ಹೋರಾಡಿ ಕೀರ್ತಿ ತಂದುಕೊಟ್ಟಂತಹ ಮಹನೀಯರಿಗೆ, ಕಲಾವಿದರಿಗೆ ಕಾಲಕಾಲಕ್ಕೆ ಸಹಾಯಧನ, ಗೌರವಧನ ಸಿಗುತ್ತಿದೆಯೆ;

ಈ) ಹಾಗಿದ್ದಲ್ಲಿ ಇದುವರೆವಿಗೂ ಎಷ್ಟು ಕಲಾವಿದರಿಗೆ ನೀಡಲಾಗಿದೆ; ಅದರ ಮೊತ್ತವೆಷ್ಟು; ಇನ್ನೂ ಎಷ್ಟು ಕಲಾವಿದರಿಗೆ ಮಾಸಾಶನ ನೀಡಲು ಬಾಕಿ ಇದೆ; ವಿವರ ನೀಡುವುದು;

ಶ್ರೀಮತಿ ರಾಣಿಸತೀಶ್ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವೆಯವರು:

ಅ) ಹೌದು

ಆ) 1. ಗೌರವಧನ - ರೂ.60,48,000-00

2. ಸಹಾಯಧನ - ರೂ.2,03,26,017-00

ಇ) ಹೌದು

ಈ) 1. 7554 ಜನರಿಗೆ ಮಾಸಾಶನ ನೀಡಿದೆ

2. ವಾರ್ಷಿಕ ವೆಚ್ಚ ಮೊತ್ತ ರೂ.26,62,000

3. 577 ಜನರಿಗೆ ಬಾಕಿ ಇದೆ.

ಶ್ರೀ ಆರ್.ಅಶೋಕ್: ನನ್ನ ಪ್ರಶ್ನೆಗೆ ಉತ್ತರವಾಗಿ 577 ಜನ ಬಾಕಿ ಇದ್ದಾರೆಂದು ತಿಳಿಸಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ ಇದಕ್ಕಿಂತ ಜಾಸ್ತಿ ಅರ್ಜಿಗಳು ಬಾಕಿ ಇವೆ. ಈಗ ಗೌರವಧನ ಏನು ಕೊಡುತ್ತಿದ್ದಾರೆ ಇದು ಬಹಳ ಕಡಿಮೆ. ಕರ್ನಾಟಕ ರಾಜ್ಯದ ಜನಸಂಖ್ಯೆ ಮತ್ತು ಕಲಾವಿದರಿಗೆ ಹೋಲಿಕೆ ಮಾಡಿದಾಗ ಈಗ ಬಿಡುಗಡೆ ಮಾಡುತ್ತಿರುವ ಹಣ ಬಹಳ ಕಡಿಮೆ. ಈಗ ಹಾಲಿ ಬಾಕಿ ಇರುವ 577 ಅರ್ಜಿಗಳು ಎಷ್ಟು ವರ್ಷಗಳಿಂದ ಬಾಕಿ ಇವೆ?